# ಸುಧೀಶ್ ವೆಂಕಟೇಶ್ ಲೇಖನ,ಇವತ್ತಿನ ನಾಯಕರು ಮಾರ್ಕಸ್ ಅರೀಲಿಯಸ್ ನ ಮೆಡಿಟೇಶನ್ಸ್ ಅನ್ನು ಯಾಕೆ ಓದಬೇಕು? ಏನಿದರ ಮಹತ್ವ? - why every leaders of this era should read meditations of marcus aurelius

vijaykarnataka.com/news/vk-special/why-every-leaders-of-this-era-should-read-meditations-of-marcus-aurelius/articleshow/111572364.cms



## ಇವತ್ತಿನ ನಾಯಕರು ಮಾರ್ಕಸ್ ಅರೀಲಿಯಸ್ ನ ಮೆಡಿಟೇಶನ್ಸ್ ಅನ್ನು ಯಾಕೆ ಓದಬೇಕು? ಏನಿದರ ಮಹತ್ವ?

Edited by ಗಣೇಶ್ ಪ್ರಸಾದ್ ಕುಂಬ್ಳೆ | Vijaya Karnataka Web 8 Jul 2024, 1:27 pm

**ಸುಮಾರು 2 ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಜಗತ್ತು ಕಂಡ ಮಹಾನ್ ದಾರ್ಶನಿಕ ದೊರೆ ಮಾರ್ಕಸ್ ಅರೀಲಿಯಸ್. ಆತ ಬರೆದ ಮೆಡಿಟೇಶನ್ ಸ್ಟಾಯಿಕ್ ತತ್ವಶಾಸ್ತ್ರದ ಸಾರವನ್ನು ಹಿಡಿದಿಟ್ಟುಕೊಂಡ ಗ್ರೀಕ್ ಭಾಷೆಯ ಕೃತಿ. ನಾಲ್ಕು ತತ್ವಗಳಾದ ಧೈರ್ಯ, ಶಿಸ್ತು, ನ್ಯಾಯ ಮತ್ತು ವಿವೇಕದ ಸಾರವನ್ನು ಈ ಕೃತಿ ಒಳಗೊಂಡಿದೆ. ಇದು ಸ್ಥೂಲವಾಗಿ ಆತ್ಮನಿಗ್ರಹವನ್ನು ಸೂಚಿಸುತ್ತದೆ. ಮತ್ತು ಇಂದಿನ ನಾಯಕರು ಕಡ್ಡಾಯವಾಗಿ ಓದಲೇಬೇಕಾದ ಕೃತಿ. ಇದರಲ್ಲಿ ಅಡಕವಾಗಿರುವ ಅಂಶಗಳೇನು? ಕೃತಿ ಮಹತ್ವವೇನು? ಇಲ್ಲಿದೆ ವಿವರಣೆ**



ಮಾರ್ಕಸ್ ಅರೀಲಿಯಸ್ ಪ್ರತಿಮೆ.(ಸಂಗ್ರಹ ಚಿತ್ರ)

**ಸುಧೀಶ್ ವೆಂಕಟೇಶ್**

ಇವತ್ತಿನ ನಾಯಕರಿಗೆ ಮಾರ್ಕಸ್ ಆರೀಲಿಯಸ್‌ನ 'ಮೆಡಿಟೇಶನ್ಸ್' ಅನ್ನು ಕಡ್ಡಾಯವಾಗಿ ಓದಿಸಬೇಕು. ಜಗತ್ತು ಎರಡು ಯುದ್ಧಗಳಿಂದ ಧ್ವಂಸಗೊಳ್ಳುತ್ತಿದೆ, ಆರ್ಥಿಕ ಅಸಮಾನತೆಯು ತನ್ನ ತುತ್ತತುದಿಯನ್ನು ತಲುಪಿದೆ ಮತ್ತು ನಾವು ಹವಾಮಾನ ವೈಪರೀತ್ಯದ ಮಹಾದುರಂತವೊಂದರ ಅಂಚಿನಲ್ಲಿ ನಿಂತಿದ್ದೇವೆ. ಸುತ್ತಲೂ ಒಮ್ಮೆ ಕಣ್ಣುಹಾಯಿಸಿದರೆ ನಮ್ಮ ಈ ಸ್ಥಿತಿಗೆ ಕಾರಣರಾದ, 'ಕಣ್ಣಿಗೆ ಕಣ್ಣು' (ಮುಯ್ಯಿಗೆ ಮುಯ್ಯಿ) ಎಂಬುದರಲ್ಲಿ ನಂಬಿಕೆ ಇಟ್ಟು ಸದಾ ಒಬ್ಬರ ಮೇಲೊಬ್ಬರು ವಿಷ ಕಾರುವ, ಸ್ವಕೇಂದ್ರಿತ ಮತ್ತು ಸಂಕುಚಿತ ದೃಷ್ಟಿಯ ಒಂದು ಹಿಂಡು ನಾಯಕರ ಪಾತ್ರವು ಎದ್ದು ಕಾಣುತ್ತದೆ.

ಮಾರ್ಕಸ್ ಆರೀಲಿಯಸ್ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಮತ್ತು ಅವನು ಈ ಜಗತ್ತು ಕಂಡ ಮಹಾನ್ ದಾರ್ಶನಿಕ ದೊರೆಗಳಲ್ಲಿ ಒಬ್ಬ. ಅವನ ಆಳ್ವಿಕೆಯ ಕಾಲದಲ್ಲಿ ರೋಮನ್ ಚಕ್ರಾಧಿಪತ್ಯವು ಜಗತ್ತಿನೆಲ್ಲೆಡೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿತ್ತು, ಮತ್ತು ಅದು ಶಾಂತಿ-ಸುಭದ್ರತೆಗಳನ್ನು ಹೊಂದಿದ್ದ ಕಾಲ. 'ಅಧಿಕಾರವು ಭ್ರಷ್ಟರನ್ನಾಗಿಸುತ್ತದೆ, ಮತ್ತು ಸಂಪೂರ್ಣ ಅಧಿಕಾರವು ಸಂಪೂರ್ಣ ಭ್ರಷ್ಟರನ್ನಾಗಿಸುತ್ತದೆ' ಎಂಬ ಲಾರ್ಡ್ ಆಕ್ಟನ್ ಮಾತಿಗೆ ಅಪವಾದವೆಂಬಂತೆ ಇದ್ದ ಆರೀಲಿಯಸ್. ಮಾರ್ಗದರ್ಶನಕ್ಕಾಗಿ ಮತ್ತು ಸ್ವ-ಸುಧಾರಣೆಗಾಗಿ ಆತ ತನಗೆ ತಾನೇ ಬರೆಯುತ್ತ ಹೋದ ಖಾಸಗಿ ಟಿಪ್ಪಣಿಗಳ ಒಂದು ಸಂಗ್ರಹ ರೂಪದ ಕೃತಿಯೇ 'ಮೆಡಿಟೇಶನ್ಸ್.' ಸ್ಟಾಯಿಕ್ ತತ್ವಶಾಸ್ತ್ರದ ಸಾರವನ್ನು ಹಿಡಿದಿಟ್ಟುಕೊಂಡ ಈ ಕೃತಿಯನ್ನು ಇವತ್ತಿನ ನಾಯಕರೆಲ್ಲರಿಗೆ ಕಡ್ಡಾಯವಾಗಿ ಓದಿಸಬೇಕು.

ಗ್ರೀಕ್ ಭಾಷೆಯಲ್ಲಿರುವ ಈ ಕೃತಿಯು ಕ್ರಿಯೆಯನ್ನು ಆಧರಿಸಿದ ತಾತ್ವಿಕತೆಯನ್ನು ಒಳಗೊಂಡಿದೆ, ಕೃತಿಯ ಹೆಚ್ಚಿನ ಪಾಲು ಆಚರಣೆಯಲ್ಲಿ ಇರಬೇಕಾದಂತಹ ಪ್ರಾಯೋಗಿಕ ತತ್ವಗಳನ್ನು ಕುರಿತು ಇದೆ. ಧೈರ್ಯ, ಶಿಸ್ತು, ನ್ಯಾಯ ಮತ್ತು ವಿವೇಕ -ಈ ನಾಲ್ಕು ತತ್ವಗಳು ಪ್ರಧಾನ ತತ್ವಗಳು. ಕೆಲವರು 'ಶಿಸ್ತಿನ' ಜಾಗದಲ್ಲಿ ಸಂಯಮ ಅಥವಾ ಸಮತೂಕದ ನಡವಳಿಕೆ ಎಂದೂ ಬಳಸುತ್ತಾರೆ, ಸ್ಥೂಲವಾಗಿ ಇವೆಲ್ಲವೂ ಆತ್ಮ ನಿಗ್ರಹವನ್ನು ಸೂಚಿಸುತ್ತವೆ.

ಮಾರ್ಕಸ್ ಆರೀಲಿಯಸ್‌ನ ಟಿಪ್ಪಣಿಗಳಲ್ಲಿ ಇವತ್ತಿನ ಸಂದರ್ಭಕ್ಕೆ ಸರಿಹೊಂದುವ ಮೂರು ಮುಖ್ಯ ಅಂಶಗಳನ್ನು ನಾನು ಇಲ್ಲಿ ವಿವರಿಸುತ್ತೇನೆ

## ಅವರೆಂದರೆ ನಾವು; ನಾವೆಂದರೆ ಅವರು

ಮಾರ್ಕಸ್ ಉದಾತ್ತ ಹೃದಯದವನಾಗಿದ್ದ ಮತ್ತು ನೈತಿಕ ಔನ್ನತ್ಯವನ್ನು ಗುರಿಯಾಗಿರಿಸಿಕೊಂಡಿದ್ದ ಸ್ಟಾಯಿಕ್ ತಾತ್ವಿಕತೆಯನ್ನು ಪರಿಪಾಲಿಸುತ್ತಿದ್ದ. ಇಡೀ ಮಾನವ ಕುಲವು ಒಂದು ಎಂಬಂತೆ ಅವನು ಗ್ರಹಿಸಿದ್ದ. ನಮ್ಮ ಮಹಾ ಉಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಬರುವ 'ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್. ಉದಾರಚರಿತಾನಾಮ್ ತು ವಸುಧೈವ ಕುಟುಂಬಕಮ್ (ಒಬ್ಬನು ಸಂಬಂಧಿ, ಮತ್ತೊಬ್ಬನು ಅಪರಿಚಿತ ಎನ್ನುತ್ತಾರೆ ಸಣ್ಣಬುದ್ಧಿಯವರು. ಉದಾರ ಹೃದಯದವರು ಇಡೀ ಜಗತ್ತೇ ಒಂದು ಕುಟುಂಬ ಎಂದುಕೊಳ್ಳುತ್ತಾರೆ) ಎಂಬ ವಿಚಾರವನ್ನು ಇದು ನಿರೂಪಿಸುವಂತಿದೆ.

ಭಾರತದ ಪಾರ್ಲಿಮೆಂಟಿನ ಮುಖ್ಯ ಪ್ರವೇಶದ್ವಾರದಲ್ಲಿ ಈ ಶ್ಲೋಕವನ್ನು ಹಾಕಿರುವುದು ಸೂಕ್ತವಾಗಿಯೇ ಇದೆ ಮತ್ತು ಇತ್ತೀಚೆಗೆ ಭಾರತದ ಅಧ್ಯಕ್ಷತೆಯಲ್ಲಿ ನಡೆದ ಜಿ-20 ರ ಥೀಮ್ ಕೂಡ ಇದೇ ಆಗಿತ್ತು.
ಸೇಡು ತೀರಿಸಿಕೊಳ್ಳುವುದು ಎಂದರೆ ನಾವು ಅವರಂತಾಗುವುದಲ್ಲ: ಪ್ರಪಂಚದಲ್ಲಿ ಎಲ್ಲ ರೀತಿಯ ಜನರೂ ಇರುತ್ತಾರೆ, ಕೆಲವರು ಒಳ್ಳೆಯವರು, ಕೆಲವರು ನಾಚಿಕೆ ತರುವಷ್ಟು ಕೆಟ್ಟವರು. ಆದರೂ ಪ್ರಪಂಚದಲ್ಲಿ ಒಳ್ಳೆಯದು ಕೆಟ್ಟದ್ದಕ್ಕಿಂತ ಜಾಸ್ತಿ ಇದೆ ಎಂದು ಮಾರ್ಕಸ್ ನಂಬಿದ್ದ.

ಕೆಡುಕಿನ ಕ್ರಿಯೆಗೆ ನೀಡುವ ಪ್ರತಿಕ್ರಿಯೆಗಳು ಸದ್ಗುಣ (ಸಚ್ಚಾರಿತ್ರ್ಯ), ನ್ಯಾಯ ಮತ್ತು ವಿವೇಕವನ್ನು ಆಧರಿಸಿರಬೇಕು, ನಮ್ಮ ಪ್ರತಿಕ್ರಿಯೆ ಯಾವತ್ತೂ ಔಚಿತ್ಯ ಮೀರಬಾರದು ಎನ್ನುವುದು ಅವನ ವಿಚಾರವಾಗಿತ್ತು. ಇದಕ್ಕೆ ಹೋಲಿಸಿದರೆ ಇವತ್ತಿನ ನಾಯಕರ ವರ್ತನೆಗಳು ತದ್ವಿರುದ್ಧವಾಗಿವೆ. ಇನ್ನೊಬ್ಬರ ಮೇಲೆ ಉದ್ದೇಶಪೂರ್ವಕವಾಗಿಯೇ ಸಮರ ಮತ್ತು ಪ್ರತೀಕಾರದ ಕಾವಿನಲ್ಲಿ ಎಷ್ಟೋ ಜನರ ಬದುಕು ಮತ್ತು ಪರಿಸರಗಳಿಗೆ ಭಾರೀ ಪ್ರಮಾಣದ ಅನಾಹುತವನ್ನೇ ಮಾಡಿರುತ್ತಾರೆ.

## ಧೈರ್ಯವೆಂದರೆ ಭಂಡತನವಲ್ಲ, ಪ್ರಶಾಂತತೆಯು ಸಾಂಸರ್ಗಿಕ

ಮಾರ್ಕಸ್ ದುರ್ಬಲನಾಗಿರಲಿಲ್ಲ ಅಥವಾ ಅನಿಶ್ಚಿತ ಮನಸ್ಸಿನವನೂ ಆಗಿರಲಿಲ್ಲ. ವಾಸ್ತವದಲ್ಲಿ ಮಾರ್ಕೊಮಾನಿ ಯುದ್ಧಗಳಲ್ಲಿ, ಮಾರ್ಕಸ್ ಮಾರ್ಕೊಮಾನಿ, ಕ್ವಾಡಿದಿ ಮತ್ತು ಸರ್ಮೇಶಿಯನ್ ಬುಡಕಟ್ಟಿನವರನ್ನು ಸೋಲಿಸಿದ್ದಲ್ಲದೆ, ಹೆಚ್ಚು ಕಡಿಮೆ ಅರ್ಧ ಮಿಲಿಯನ್ ಸೈನ್ಯಬಲಕ್ಕೆ ನಾಯಕನಾಗಿದ್ದ. ಇಷ್ಟಾದರೂ ಅವನ ಎಲ್ಲಾ ಕ್ರಿಯೆಗಳು ಸದ್ಗುಣಗಳಿಂದಲೇ ನಿರ್ದೇಶಿತವಾಗಿರುತ್ತಿತ್ತು. ಹಾಗೆಂದು ಅವನು ಅಮಾಯಕನೂ ಆಗಿರಲಿಲ್ಲ. ಅವನು ಪ್ರಶಂಸೆಯಲ್ಲಿ ಯಾವುದು ಪ್ರಾಮಾಣಿಕ ಅಪ್ರಾಮಾಣಿಕ ಎಂಬುದನ್ನು ವಿವೇಚಿಸಬಲ್ಲವನಾಗಿದ್ದ ಅಲ್ಲದೇ, ಒಬ್ಬನಲ್ಲಿ ಜೀವಪರ ಆಶಯಗಳಿವೆ ಎಂಬುದು ಗೊತ್ತಿದ್ದರೆ ಅವನು ತನ್ನನ್ನು ಅತ್ಯಂತ ಕಠೋರವಾಗಿ ಟೀಕಿಸುವ ವ್ಯಕ್ತಿಯ ಮಾತನ್ನೂ ಸಹ ಕೇಳುತ್ತಿದ್ದ.

ಇತ್ತೀಚಿನ ಚರಿತ್ರೆಯಲ್ಲಿ ನಾಯಕನೊಬ್ಬ ಈ ಸ್ಟಾಯಿಕ್ ತತ್ವವನ್ನು ಪ್ರದರ್ಶಿಸಿದ ಉದಾಹರಣೆಯನ್ನು ನೋಡುವುದಾದರೆ, 1962 ರ ಅಕ್ಟೋಬರ್‌ನ ಪ್ರಸಂಗವನ್ನು ನೆನಪಿಸಿಕೊಳ್ಳಬಹುದು. ಅಮೆರಿಕದ ಗೂಢಚಾರಿ ವಿಮಾನವೊಂದು ಕ್ಯೂಬಾದಲ್ಲಿ ಆಗಿನ ಸೋವಿಯೆತ್ ಒಕ್ಕೂಟದಿಂದ ನಿರ್ಮಿಸಲಾಗುತ್ತಿದ್ದ ಪರಮಾಣು ಕ್ಷಿಪಣಿ ಉಡ್ಡಯನಾ ತಾಣಗಳನ್ನು ತನ್ನ ಕ್ಯಾಮೆರಾದಲ್ಲಿ ಸೆರೆ ಹಿಡಿಯಿತು.
ಕ್ಯೂಬಾ ಮೇಲೆ ಶೀಘ್ರವಾಗಿ ವೈಮಾನಿಕ ದಾಳಿ ಮತ್ತು ಆಕ್ರಮಣ ನಡೆಸುವಂತೆ ಆಗಿನ ಅಮೆರಿಕದ ಅಧ್ಯಕ್ಷ ಜಾನ್ ಎಫ್ ಕೆನಡಿಯವರ ಮೇಲೆ ಬಹಳ ಒತ್ತಡವಿತ್ತು. ಕೆನಡಿಯವರು ಸುದೀರ್ಘ ವಿಚಾರಮಂಥನದ ತರುವಾಯ ಕ್ಯೂಬಾದ ಸುತ್ತ ನೌಕಾ ಪಡೆಗಳನ್ನು ನಿಲ್ಲಿಸುವ ನಿರ್ಧಾರವನ್ನು ಮಾಡಿದರು. ಇಡೀ ಜಗತ್ತು ಕೆನಡಿಯವರ ನಿರ್ಧಾರಕ್ಕಾಗಿ ಹದಿಮೂರು ದಿನಗಳ ಕಾಲ ಕಾದಿತ್ತು. ಈ ಪ್ರಕಾರದ "ಕ್ವಾರಂಟೈನ್" ಪರಿಣಾಮವಾಗಿ ರಶಿಯಾದ ಕಡೆಯಿಂದ ಆಗುತ್ತಿದ್ದ ಮಿಲಿಟರಿ ಸರಬರಾಜು ನಿಂತಿತು.

ಕೆನೆಡಿ ಶಾಂತವಾಗಿರಲು ನಿರ್ಧರಿಸಿದ್ದರು ಮತ್ತು ರಶಿಯಾದ ಅಧ್ಯಕ್ಷ ಕ್ರುಶ್ಚೇವ್ ಜೊತೆ ಚರ್ಚಿಸಿ ಶಾಂತಿಯುತ ಪರಿಹಾರವನ್ನೂ ಕಂಡುಕೊಂಡರು. ಧೈರ್ಯಶಾಲಿ ನಾಯಕರು ಆತುರ ಪಡುವುದಿಲ್ಲ; ಏಕಾಂತತೆ ಮತ್ತು ಪರ್ಯಾಲೋಚನೆಗಾಗಿ ಅವರು ತಮ್ಮಲ್ಲಿ ಆಸ್ಪದ ಕಲ್ಪಿಸಿಕೊಂಡಿರುತ್ತಾರೆ. ಪ್ರಚೋದಕ ಮತ್ತು ಪ್ರತಿಕ್ರಿಯೆಗಳ ನಡುವೆ ಅಮೂಲ್ಯ ಕ್ಷಣಗಳಿದ್ದಿರುತ್ತವೆ ಎನ್ನುವುದು ಅವರಿಗೆ ಗೊತ್ತಿರುತ್ತದೆ.
ಮಾರ್ಕಸ್ ತನ್ನೊಂದಿಗೆ ಇದ್ದ ಅನೇಕ ಅನುಭವಸ್ಥರಿಂದ ಸಲಹೆ ಮತ್ತು ಮಾರ್ಗದರ್ಶನದ ಲಾಭ ಪಡೆದುಕೊಳ್ಳುತ್ತಿದ್ದ. 23 ವರ್ಷಗಳವರೆಗೆ ಜೊತೆಗಿದ್ದ ಆಂಟೋನಿನ್ನಸ್ ಪಯಸ್‌ನಿಂದ ಬಹಳಷ್ಟನ್ನು ಕಲಿತೆ ಎನ್ನುತ್ತಾನೆ. ವಿಶೇಷವಾಗಿ, "ಶಾಂತಿಯ ಮಹತ್ವವನ್ನು ಮತ್ತು ಹಣಕಾಸಿನ ನಿರ್ವಹಣೆಯನ್ನು" ಪಯಸ್‌ನಿಂದ ಕಲಿತ.

ಮ್ಯಾಕ್ಸಿಮಸ್‌ನಿಂದ "ಎಲ್ಲಾ ಸಂದರ್ಭಗಳಲ್ಲಿ ಪ್ರಸನ್ನವಾಗಿರುವುದು, ಎದುರಿಗೆ ಏನಿದೆಯೋ ಅದನ್ನು ಮಾಡುವುದು, ಮತ್ತು ಮಾಡುವ ಕೆಲಸದಲ್ಲಿ ಕೆಟ್ಟ ಆಶಯವನ್ನೆಂದೂ ಇಟ್ಟುಕೊಳ್ಳಬಾರದು" ಎನ್ನುವುದನ್ನು ಕಲಿತ. "ಕ್ರೋಧ ಮಾಡಿಕೊಳ್ಳಬಾರದು" ಎನ್ನುವುದನ್ನು ಕೆಟಲಸ್‌ನಿಂದ ಕಲಿತ. ಡಯೋನೀಟಸ್‌ನಿಂದ "ಕ್ಷುಲ್ಲಕ ಸಂಗತಿಗಳಲ್ಲಿ ವ್ಯಸ್ತನಾಗಿರಬಾರದು ಮತ್ತು ಅವಶ್ಯಕತೆ ಇದ್ದದ್ದನ್ನು ಮಾಡಬೇಕು" ಎನ್ನುವುದನ್ನು ಕಲಿತ. ಹೆಸರಿಸದ ಇನ್ನೂ ಅನೇಕರಿಂದ "ಕಡಿಮೆ ಬಯಸುವುದು, ತಾನೇ ಕೈಯ್ಯಾರೆ ಕೆಲಸ ಮಾಡುವುದು, ಮತ್ತು ಇತರರ ಕೆಲಸಗಳಲ್ಲಿ ಮೂಗು ತೂರಿಸದೇ ಇರುವುದನ್ನು" ಕಲಿತ.

ಮೆಡಿಟೇಶನ್ಸ್‌ನಿಂದ ಇವತ್ತಿನ ನಾಯಕರು ಕಲಿಯುವುದು ಬಹಳವಿದೆ. ಅದನ್ನು ನೆಲ್ಸನ್ ಮಂಡೇಲಾ ಸೆರೆಮನೆಯಲ್ಲಿದ್ದಾಗ ಓದಿದ್ದರಂತೆ. ಬಿಡುಗಡೆಯಾದ ನಂತರದ ಅವರ ಮಾತುಗಳಲ್ಲಿ ಸ್ಟಾಯಿಕ್ ವಿಚಾರಗಳು ಅಡಕವಾಗಿದ್ದದ್ದನ್ನು ನಾವು ಕಾಣಬಹುದು. ಬಿಲ್ ಕ್ಲಿಂಟನ್ ಪ್ರತಿ ವರ್ಷವೂ ಮತ್ತೆ ಮತ್ತೆ ಓದುತ್ತಿದ್ದರಂತೆ. ಜನರಲ್ ಜೇಮ್ಸ್ ಮ್ಯಾಟಿಸ್‌ಗೆ ಸ್ಟಾಯಿಕ್ ತತ್ವಗಳಲ್ಲಿ ದೃಢವಾದ ನಂಬಿಕೆ ಇತ್ತು,

ಅವರು ತಮ್ಮ ಭಾವಸಂತುಲನಕ್ಕಾಗಿ ಈ ಕೃತಿಯ ಒಂದು ಪ್ರತಿಯನ್ನು ತಮ್ಮೊಂದಿಗೆ ಸದಾ ಇಟ್ಟುಕೊಳ್ಳುತ್ತಿದ್ದರು. ಇರಾಕ್ ಯುದ್ಧದ ಸಮಯದಲ್ಲಿ ಸಹ ಈ ಪ್ರತಿ ಅವರೊಂದಿಗೆ ಇತ್ತು.

ಇವತ್ತು ಜಗತ್ತಿಗೆ ವಿರಕ್ತ ನಾಯಕರ ಅಗತ್ಯವು ಹಿಂದೆಂದಿಗಿಂತಲೂ ಹೆಚ್ಚಿದೆ, ಎಲ್ಲಿ ಎಲ್ಲೆ ಮೀರಿದೆವು, ಎಲ್ಲಿ ನಿಲ್ಲಿಸಬೇಕು ಎನ್ನುವುದನ್ನು ಅರಿತವರು.

**(ಸುಧೀಶ್ ವೆಂಕಟೇಶ್ ಅಜೀಮ್ ಪ್ರೇಮ್‌ಜಿ ಫೌಂಡೇಷನ್ನಿನ ಮುಖ್ಯ ಸಂವಹನಾಧಿಕಾರಿಯಾಗಿದ್ದಾರೆ)**

ಲೇಖಕರ ಬಗ್ಗೆ

ಗಣೇಶ್ ಪ್ರಸಾದ್ ಕುಂಬ್ಳೆ
ವಿಜಯ ಕರ್ನಾಟಕದಲ್ಲಿ ಡಿಜಿಟಲ್ ಪತ್ರಕರ್ತ. ಪತ್ರಿಕೋದ್ಯಮದಲ್ಲಿ 15 ವರ್ಷಗಳ ಅನುಭವ. ಓದುವಿಕೆ, ಬರೆಯುವಿಕೆ, ಯಕ್ಷಗಾನದಲ್ಲಿ ಆಸಕ್ತಿ. ಸಮಯ ಸಿಕ್ಕಾಗ ಚೆಸ್, ಕ್ರಿಕೆಟ್, ಶಟಲ್ ಆಡುವುದು, ಪ್ರವಾಸ, ಚಾರಣ ಮಾಡುವುದು ನೆಚ್ಚಿನ ಹವ್ಯಾಸಗಳು. ಶಿವರಾಮ ಕಾರಂತ ಮತ್ತು ಪೂರ್ಣಚಂದ್ರ ತೇಜಸ್ವಿಯವರ ಬರಹಳೆಂದರೆ ಅಚ್ಚುಮೆಚ್ಚು. ರಾಜಕೀಯ, ಕ್ರೀಡೆ, ಮಾನವೀಯ ಸಂವೇದಿ ಲೇಖನಗಳು, ವ್ಯಕ್ತಿಚಿತ್ರ, ನುಡಿಚಿತ್ರ, ಲಲಿತ ಪ್ರಬಂಧಗಳನ್ನು ಬರೆಯುವುದರಲ್ಲಿ ಆಸಕ್ತಿ.... ಇನ್ನಷ್ಟು ಓದಿ